ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ) 104 (18)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಅನುದಾನಿತ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅನುದಾನಿತ ಶಾಲಾ ಶಿಕ್ಷಕರಿಗೆ ವೇತನವನ್ನು ಸರ್ಕಾರವೇ ನೀಡುತ್ತಿದ್ದು, ಈಗ ಹೆಚ್ಚುವರಿ ಶಿಕ್ಷಕರೆಂದು ಅವರ ವರ್ಗಾವಣೆಯನ್ನು ಸರ್ಕಾರವೇ ಮಾಡುತ್ತಿರುವುದರಿಂದ ಅನುದಾನಿತ ಶಾಲೆಗಳನ್ನು ರಾಷ್ಟ್ರೀಕರಣ ಗೊಳಿಸಿ, ಏಕ ರೂಪದ ಶಿಕ್ಷಣ ನೀತಿಯನ್ನು ಜಾರಿಗೆ ತರುವುದರ ಮೂಲಕ ಅನುದಾನಿತ ಶಾಲಾ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಬಹುದು, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಬಸವರಾಜ ಹೊರಟ್ಟಿ

ಅ)ಇಲ್ಲ.

ಆ) ಅನುದಾನಿತ ಶಾಲಾ ಕಾಲೇಜುಗಳು ಆಯಾಯ ಖಾಸಗಿ ಶಿಕ್ಷಣ ಸಂಸ್ಥೆಗೆ ಸೇರಿರುತ್ತದೆ. ಈ ರೀತಿ ಅವುಗಳ ಮಾಲೀಕತ್ವ ಖಾಸಗಿಯಾಗಿದೆ. ನಿಯಮಗಳ ಪ್ರಕಾರ ಅಂತಹ ಶಾಲೆಗಳ ನೌಕರರಿಗೆ ಸಂಬಂಧಿಸಿದಂತೆ ನೇಮಕಾತಿ ಪಾಧಿಕಾರ ಹಾಗಾ ಶಿಸ್ತಿನ ಪ್ರಾಧಿಕಾರ ಆಯಾಯಾ ಆಡಳಿತ ಮಂಡಳಿಯಾಗಿದೆ. ಆ ನೌಕರರ ಮತ್ತು ಸರ್ಕಾರದ ನಡುವೆ ನೌಕರ–ಮಾಲೀಕ(Master-Servant) ಸಂಬಂಧ ಇರುವುದಿಲ್ಲ. ಅವರು ಆಯಾಯಾ (ಖಾಸಗಿ) ಆಡಳಿತ ನೌಕರರಾಗಿರುತ್ತಾರೆ.

ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನೆ 98 ಮತ್ತು 99ರ ಪ್ರಕಾರ, ಅದನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು

ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು, 1999ರ ನಿಯಮ 10 ಮತ್ತು 11ರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ಕ್ರಮ ತೆಗೆದುಕೊಂಡು ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು ರಿಟ್ರೆಂಚ್ ಮಾಡಿ ಅವರ ಅನುದಾನವನ್ನು ನಿಲ್ಲಿಸಿ, ರಿಟ್ರೆಂಚ್ ಆದವರ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ನಿರ್ವಹಿಸಿ ಕೊಂಡು, ಗಣಕೀಕೃತ ಕೌನ್ಸಿಲಿಂಗ್ (computerized counseling) ಮೂಲಕ ಜೇಷ್ಠತೆಯ ಆಧಾರದ ಮೇಲೆ ಅವರುಗಳನ್ನು ರಿಕ್ತಸ್ಥಾನಗಳು (ಕಾರ್ಯಭಾರ) ಲಭ್ಯವಿರುವ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಆಸ್ಪದ ಇರುತ್ತದೆ. ಅಂತಹ ಶಿಕ್ಷಕರನ್ನು ಸೇವೆಯಿಂದ ಟರ್ಮಿನೇಟ್ (Terminate) ಮಾಡಲು ಸಹ ಸೆಕ್ಷನ್ 99ರನ್ವಯ ಆಸ್ಪದ ಇರುತ್ತದೆ. ಆದರೆ, ಮಾನವೀಯತೆಯ ದೃಷ್ಟಿಯಿಂದ ಹಾಗೂ ಬಹು ಸಂಖ್ಯೆಯಲ್ಲಿರುವ (2000 ಕ್ಕೂ ಮೇಲ್ಪಟ್ಟು) ಸದರಿ ಹೆಚ್ಚುವರಿ ಶಿಕ್ಷಕರು ಮತ್ತು ಅವರ ಕುಟುಂಬಗಳಿಗೆ ಆಗಬಹುದಾಧ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು ಉದ್ದೇಶಿಸಿ, ಸರ್ಕಾರ ದಿ.10.4.2007ರ ಆದೇಶ ಸಂಖ್ಯೆ ಇಡಿ 111 ಪಿಎಂಸಿ 2006ರನ್ವಯ ಅಂತಹ ಶಿಕ್ಷಕರನ್ನು ಕಾರ್ಯಭಾರ ಇರುವ ಇತರೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಹಂಚಿಕೆ ಮಾಡಲು ಆಸ್ಪದ ಕಲ್ಪಿಸಿದೆ.

ಇದಲ್ಲದೇ, ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ ಹಾಗೂ ಅವರ ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರ ಕರ್ನಾಟಕ ಶಿಕ್ಷಣ ಅದಿನಿಯಮ, 1983 ಹಾಗೂ ಅದರಡಿ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು, 1999ರನ್ವಯ ಅಗತ್ಯ ಆಸ್ಪದಗಳನ್ನು ಕಲ್ಪಿಸಿದೆ. ಸರ್ಕಾರ ಸಹಾಯಾನುದಾನ ನೀಡುತ್ತಿರುವ ಕಾರಣಕ್ಕಾಗಿ ಅಥವಾ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರ ಇರುವ ಇತರೆ ಅನುದಾನಿತ ಖಾಸಗಿ ಶಾಲೆಗಳಿಗೆ ಹಂಚಿಕೆ ಮಾಡುತ್ತಿರುವ ಕಾರಣಕ್ಕಾಗಿ ಆ ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣ ಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಅಂತಹ ರಾಷ್ಟ್ರೀಕರಣಗೊಳಿಸುವುದು ಅಗತ್ಯವಿಲ್ಲವೆನ್ನುವುದು ಸರ್ಕಾರದ ನಿಲುವು ಆಗಿದೆ.